ಕೃಷ್ಣಾ ಹಾಗೂ ಗೋದಾವರಿ ನೀರಿನ ಬಳಕೆಗೆ ಸರ್ಕಾರ ಕೈಗೊಂಡ ಕ್ರಮಗಳು

77 (196) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಚಾವತ್ ಆಯೋಗದ ತೀರ್ಪಿನನ್ವಯ ಕೃಷ್ಣಾ ಮತ್ತು ಗೋದಾವರಿಯಿಂದ ಎಷ್ಟು ಪ್ರಮಾಣದ ನೀರನ್ನು ನಾವು 2000 ಇಸವಿಯೊಳಗೆ ಉಪಯೋಗಿಸಬೇಕಾಗಿದೆ;

ಆ) ಇಂದಿನವರೆಗೆ ನಾವು ಉಪಯೋಗ ಮಾಡಿಕೊಂಡಿರುವ ನೀರಿನ ಪ್ರಮಾಣವೆಷ್ಟು;

ಇ) ಮೇಲ್ಕಂಡ 2 ಬೇಸಿನ್‌ಗಳಿಂದ 2000 ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಯೋಜನೆಗಳನ್ನು ಅವಧಿಯೊಳಗೆ ಪೂರ್ಣಗೊಳಿಸಲು ಹೆಚ್ಚು ಪ್ರಮಾಣದ ಹಣಕಾಸಿನ ನೆರವನ್ನು ಬಿಡುಗಡೆ ಮಾಡಲಾಗುವುದೇ;

ಉ) ಮೇಲ್ಕಂಡ ಬಚಾವತ್ ಆಯೋಗದ ತೀರ್ಪಿನ ವಿಷಯವಾಗಿ ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಆಂಧ್ರದ ಮುಖ್ಯಮಂತ್ರಿಗಳ ಪ್ರಚಲಿತ ಪ್ರವಾಸ ಮಾಡಿದ ಸಂದರ್ಭದಲ್ಲಿ ನೀಡಿರುವ ಹೇಳಿಕೆಯ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) ಬಚಾವತ್ ನ್ಯಾಯಾಧೀಕರಣ ತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಕೃಷ್ಣಾ ಕೊಳ್ಳದಲ್ಲಿ 734ಟಿಎಂಸಿ ಮತ್ತು ಗೋದಾವರಿ ಕೊಳ್ಳದಲ್ಲಿ 22.37 ಟಿಎಂಸಿ ನೀರು ಲಭ್ಯವಾಗಿದೆ. ಕೃಷ್ಣಾ ನೀರಿನ ಹಂಚಿಕೆ 31-5-2000ದಲ್ಲಿ ಪುನರ್ ಪರಿಶೀಲನೆ ಆಗಬಹುದಾಗಿದ್ದು, ರಾಜ್ಯದ ಹಿತಾಸಕ್ತಿಯಿಂದ ಕೃಷ್ಣಾ ನದಿ ನೀರಿನ ಪಾಲನ್ನು ಈ ದಿನಾಂಕದ ಒಳಗೆ ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಗೋದಾವರಿ ಕೊಳ್ಳದಲ್ಲಿ ಪ್ರಾಪ್ತವಾಗಿರುವ ನೀರನ್ನು ಉಪಯೋಗಿಸಿಕೊಳ್ಳಲು ನ್ಯಾಯಾಧೀಕರಣವು ಯಾವ ಗಡುವನ್ನೂ ನಿಗದಿಪಡಿಸಿಲ್ಲ.

ಆ) ದಿನಾಂಕ 31-3-92ರವರೆಗೆ ಪೂರ್ಣಗೊಂಡಿರುವ ಹಾಗೂ ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಕೃಷ್ಣಾ ಕೊಳ್ಳದಲ್ಲಿ 472.21 ಟಿಎಂಸಿ ಹಾಗೂ ಗೋದಾವರಿ ಕೊಳ್ಳದಲ್ಲಿ 6.88 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಕೃಷ್ಣಾ ಮತ್ತು ಗೋದಾವರಿ ಕೊಳ್ಳಗಳಲ್ಲಿ ರಾಜ್ಯಕ್ಕೆ ಲಭಿಸಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಬೃಹತ್ ಯೋಜನೆಗಳನ್ನು (Master Plans) ತಯಾರಿಸಿದ್ದು ಈ ಯೋಜನೆಗಳ ಪ್ರಕಾರ ಎರಡೂ ಕೊಳ್ಳಗಳ ನೀರಾವರಿ ಯೋಜನೆಗಳನ್ನು ಕೈಗೊಂಡು ಪೂರ್ಣಗೊಳಿಸುವ ಉದ್ದೇಶವಿದ್ದು, ಈ ಯೋಜನೆಗಳಿಗೆ ಅಗತ್ಯವಿರುವ ಬಾಕಿ ಹಣವನ್ನು ಒದಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಕೃಷ್ಣಾ ನದಿ ನೀರಿನ ನ್ಯಾಯಾಧೀಕರಣದ ಪ್ರಸ್ತುತ ತೀರ್ಪಿನ ಪ್ರಕಾರ ರಾಜ್ಯಕ್ಕೆ ಲಭ್ಯವಾಗಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದಲ್ಲದೆ, ಕೃಷ್ಣಾ ನದಿಯ ಹೆಚ್ಚುವರಿ ನೀರಿನ ಹಂಚಿಕೆಯ ಬಗ್ಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ

ರಾಜ್ಯಗಳೊಡನೆ ಚರ್ಚಿಸಲಾಗುತ್ತಿದ್ದು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಬೆಂಗಳೂರು – ಮೈಸೂರು ರಸ್ತೆಯನ್ನು ಜೋಡಿ ರಸ್ತೆಯ ಪರಿವರ್ತನೆ

80 (946) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು–ಮೈಸೂರು ಜೋಡಿ ರಸ್ತೆ ಮಾಡಲು ಸರ್ಕಾರದವರು ನಿರ್ಧರಿಸುವರೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಇಲ್ಲ

ಬೈಲಹೊಂಗಲ ತಾಲ್ಲೂಕಿನಲ್ಲಿ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಶಿಫಾರಸ್ಸು

119 (652) ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿಧಾನಸಭೆಯ ಅಂದಾಜು ಸಮಿತಿಯವರು ಸೂಚಿಸಿದ 9ನೇ ವಿಧಾನಸಭೆಯ 4ನೇ ವರದಿಯಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇವಲಾಪೂರ, ಸಂಗೊಳ್ಳಿ, ಅನಿಗೋಳ, ಹಾಗೂ ಸವದತ್ತಿ ತಾಲ್ಲೂಕಿನ ಮೊಟ್ಟೆಬ್ಬಳ್ಳಿ, ಏಣಗಿ ಗ್ರಾಮಗಳಲ್ಲಿ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಅಥವಾ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಆ) ಈ ಯೋಜನೆಗಳನ್ನು ಅಂದಾಜು ಸಮಿತಿಯವರು 3 ತಿಂಗಳೊಳಗಾಗಿ ಕೈಕೊಳ್ಳಬೇಕೆಂದು ಹಾಗೂ ಅದಕ್ಕೆ ಬೇಕಾಗುವ ಹಣವನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಇ) ಅಂದಾಜು ಸಮಿತಿಯವರು ಸೂಚಿಸಿದ ಪ್ರಕಾರ ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ತೆಗೆದುಕೊಳ್ಳಬೇಕೆಂದು ಹಾಗೂ ಇದಕ್ಕೆ ಹಣ ಒದಗಿಸಲು ಮುಖ್ಯ ಇಂಜಿನೀಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರಿಗೆ ಸೂಚಿಸಿರುವರೆ;

ಈ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಇನ್ನೂವರೆಗೂ ಕೆಲಸ ಪ್ರಾರಂಭವಾಗದೇ ಇದ್ದದ್ದರಿಂದ ಸರಕಾರದವರು ಈ ಕೆಲಸಗಳನ್ನು ಬೇಗನೆ ಪ್ರಾರಂಭಿಸಲು ಯಾವ ಕ್ರಮ ಕೈಕೊಂಡಿರುವರು;

ಉ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಯೋಜನೆಗಳನ್ನು ಪ್ರಾರಂಭಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ;

ಊ) ಈ ಪ್ರತಿಯೊಂದೂ ಏತ ನೀರಾವರಿ ಯೋಜನೆಗೆ ಎಷ್ಟು ಹಣ ಬೇಕಾಗುವುದು ಹಾಗೂ ಎಷ್ಟು ಎಕರೆ ನೀರಾವರಿ ಆಗುವುದು (ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಎಷ್ಟು ಗ್ರಾಮಗಳಿಗೆ ಎಷ್ಟು ಎಷ್ಟು ಎಕರೆ ನೀರಾವರಿ ಆಗುವುದು ಎಲ್ಲಿ ಸಂಪೂರ್ಣ ವಿವರ ಒದಗಿಸುವುದು) ?